# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 14 (17) |
| ಮಾನ್ಯ ಸದಸ್ಯರ ಹೆಸರು | : | ಶ್ರೀ ಎಫ್.ಹೆಚ್. ಜಕ್ಕಪ್ಪನವರ್ (ನಾಮನಿರ್ದೇಶಿತರು ಚುನಾವಣಾ ಕ್ಷೇತ್ರ) |
| ಉತ್ತರಿಸುವ ದಿನಾಂಕ | : | 27.01.2026 |
| ಉತ್ತರಿಸುವ ಸಚಿವರು | : | ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಕರ್ನಾಟಕ ಕೈಗಾರಿಕೆ ಪ್ರದೇಶ ಅಭಿವೃದ್ಧಿ ಮಂಡಳಿ (KIADB), ಧಾರವಾಡ ಇವರಿಂದ ಹುಬ್ಬಳಿ-ಧಾರವಾಡ ಕೈಗಾರಿಕೆ ಪ್ರದೇಶದ ವ್ಯಾಪ್ತಿಯಲ್ಲಿ ಇದುವರೆಗೆ ಒಟ್ಟು ಎಷ್ಟು ಎಕರೆ ಕೈಗಾರಿಕೆ ನಿವೇಶನಗಳನ್ನು ಉದ್ಯಮಿಗಳಿಗೆ ಹಂಚಿಕೆ ಮಾಡಲಾಗಿದೆ:(ಸಂಪೂರ್ಣ ವಿವರ ನೀಡುವುದು): | ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯು ಧಾರವಾಡ ಜಿಲ್ಲೆಯಲ್ಲಿ ಅಭಿವೃದ್ಧಿಪಡಿಸಿರುವ ಕೈಗಾರಿಕಾ ಪ್ರದೇಶಗಳಲ್ಲಿ ಒಟ್ಟು 2375.43 ಎಕರೆ ಜಮೀನನ್ನು 1464 ಉದ್ದಿಮೆದಾರರಿಗೆ ಹಂಚಿಕೆ ಮಾಡಲಾಗಿದೆ. ವಿವರಗಳನ್ನು **ಅನುಬಂಧ** ದಲ್ಲಿ ಒದಗಿಸಿದೆ. |
| ಆ) | ಸದರಿ ನಿವೇಶನಗಳ ಪೈಕಿ ಪರಿಶಿಷ್ಟ ಜಾತಿ (SC) ಮತ್ತು ಪರಿಶಿಷ್ಟ ಪಂಗಡ (ST) ಉದ್ಯಮಿಗಳಿಗೆ ಹಂಚಿಕೆಯಾಗಿರುವ ಕೈಗಾರಿಕೆ ನಿವೇಶನಗಳು ಎಷ್ಟು: (ಜಾತಿವಾರು ಮತ್ತು ವಿಸ್ತೀರ್ಣವಾರು ಮಾಹಿತಿ ನೀಡುವುದು) | ಮಂಡಳಿಯು ಧಾರವಾಡ ಜಿಲ್ಲೆಯ ಕೈಗಾರಿಕಾ ಪ್ರದೇಶಗಳಲ್ಲಿ ಪರಿಶಿಷ್ಠ ಜಾತಿ ವರ್ಗದಡಿ 261 ಉದ್ದಿಮೆದಾರರಿಗೆ ಒಟ್ಟಾರೆ 139.28 ಎಕರೆ ಜಮೀನನ್ನು ಮತ್ತು ಪರಿಶಿಷ್ಠ ಪಂಗಡ ವರ್ಗದಡಿ 92 ಉದ್ದಿಮೆದಾರರಿಗೆ ಒಟ್ಟಾರೆ 42.31 ಎಕರೆ ಜಮೀನನ್ನು ಹಂಚಿಕೆ ಮಾಡಲಾಗಿದೆ. ವಿವರಗಳನ್ನು **ಅನುಬಂಧ** ದಲ್ಲಿ ಒದಗಿಸಿದೆ. |
| ಇ) | ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಉದ್ಯಮಿಗಳಿಗೆ ನಿಗಧಿಪಡಿಸಿರುವ ಮೀಸಲಾತಿಯ ಅನ್ವಯ ಪೂರ್ಣಪ್ರಮಾಣದಲ್ಲಿ ನಿವೇಶನಗಳ ಹಂಚಿಕೆಯಾಗಿದೆಯೇ: ಇಲ್ಲದಿದ್ದಲ್ಲಿ, ಬಾಕಿ ಉಳಿದಿರುವ ನಿವೇಶನಗಳ ಸಂಖ್ಯೆ ಎಷ್ಟು ಮತ್ತು ಅವುಗಳನ್ನು ಹಂಚಿಕೆ ಮಾಡಲು | ದಿನಾಂಕ:21-03-2009 ರಂದು ನಡೆದ ಕೆಐಎಡಿಬಿ ಮಂಡಳಿ ಸಭೆಯಲ್ಲಿ ಪರಿಶಿಷ್ಠ ಜಾತಿ/ಪರಿಶಿಷ್ಠ ಪಂಗಡದ ಉದ್ದಿಮೆದಾರರಿಗೆ ಮಂಡಳಿಯು ಇನ್ನು ಮುಂದೆ ಅಭಿವೃದ್ಧಿಪಡಿಸುವ ಹೊಸ ಕೈಗಾರಿಕಾ ಪ್ರದೇಶಗಳಲ್ಲಿ ಹಂಚಿಕೆ ಪ್ರದೇಶದ ಶೇ.22.65 ರಷ್ಟು ಜಮೀನನ್ನು ಮೀಸಲಿಟ್ಟು ಹಂಚಿಕೆ ಮಾಡಲು ತೀರ್ಮಾನಿಸಿರುತ್ತದೆ. |

| | | |
|---|---|---|
| | ಸರ್ಕಾರ ಕೈಗೊಂಡಿರುವ ಕ್ರಮಗಳೇನು: | ಮುಂದುವರೆದು, ದಿನಾಂಕ 09-06-2022 ರಂದು ನಡೆದ ಕೆಐಎಡಿಬಿ ಮಂಡಳಿ ಸಭೆಯಲ್ಲಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಉದ್ದಿಮೆದಾರರಿಗೆ ಮಂಡಳಿಯು ಇನ್ನು ಮುಂದೆ ಅಭಿವೃದ್ಧಿಪಡಿಸುವ ಹೊಸ ಕೈಗಾರಿಕಾ ಪ್ರದೇಶಗಳಲ್ಲಿ ಹಂಚಿಕೆ ಪ್ರದೇಶದ ಶೇ.24.10 ರಷ್ಟು ಜಮೀನನ್ನು ಮೀಸಲಿಟ್ಟು ಹಂಚಿಕೆ ಮಾಡಲು ತೀರ್ಮಾನಿಸಿರುತ್ತದೆ.<br><br>ಸದರಿ ಮಂಡಳಿ ಸಭೆಗಳ ನಿರ್ಣಯದನ್ವಯ ಧಾರವಾಡ ಜಿಲ್ಲೆಯ ಕೈಗಾರಿಕಾ ಪ್ರದೇಶಗಳಲ್ಲಿ ಮೀಸಲಾತಿ ಕಲ್ಪಿಸಿ ನಿವೇಶನ ಹಂಚಿಕೆ ಮಾಡಲಾಗಿರುತ್ತದೆ.<br><br>ಧಾರವಾಡ ಜಿಲ್ಲೆಯ ಹೊಸ ಕೈಗಾರಿಕಾ ಪ್ರದೇಶವಾದ ಮಮ್ಮಿಗಟ್ಟಿ 2ನೇ ಹಂತ ಕೈಗಾರಿಕಾ ಪ್ರದೇಶದಲ್ಲಿ 48.01 ಎಕರೆ ಮತ್ತು ಕೋಟೂರು ಬೇಲೂರು ಇ.ಎಂ.ಸಿ. ಕ್ಲಸ್ಟರ್ 36.75 ಎಕರೆ ಜಮೀನನ್ನು ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದ ಉದ್ದಿಮೆದಾರರಿಗೆ ಹಂಚಿಕೆಗೆ ಮೀಸಲಿಟ್ಟಿದ್ದು, ರಾಜ್ಯ ಮಟ್ಟದ ಏಕಗವಾಕ್ಷಿ ಸಮಿತಿ ಸಭೆ ಹಾಗೂ ಜಿಲ್ಲಾ ಮಟ್ಟದ ಏಕಗವಾಕ್ಷಿ ಸಮಿತಿ ಸಭೆ, ಧಾರವಾಡ ಇಲ್ಲಿ ಅನುಮೋದನೆಯಾಗುವ ಯೋಜನೆಗಳಿಗೆ ಹಂಚಿಕೆ ಮಾಡಲಾಗುತ್ತದೆ. |
| ಈ) | ಹುಬ್ಬಳ್ಳಿ-ಧಾರವಾಡ ಭಾಗದಲ್ಲಿ ಹೊಸದಾಗಿ ಕೈಗಾರಿಕೆಗಳನ್ನು ಸ್ಥಾಪಿಸಲು ಬಾಕಿ ಇರುವ ಅರ್ಜಿಗಳ ಸಂಖ್ಯೆ ಎಷ್ಟು ಮತ್ತು ಅವುಗಳಿಗೆ ಯಾವಾಗ ನಿವೇಶನ ಹಂಚಿಕೆ ಮಾಡಲಾಗುವುದು? | ಧಾರವಾಡ ಜಿಲ್ಲೆಯ ಕೋಟೂರ್-ಬೇಲೂರ ಕೈಗಾರಿಕಾ ಪ್ರದೇಶ ಹಾಗೂ ಮಮ್ಮಿಗಟ್ಟಿ 2 ನೇ ಹಂತದಲ್ಲಿ ನಿವೇಶನ ಹಂಚಿಕೆ ಕುರಿತು ಯೋಜನೆ ಅನುಮೋದನೆಗಾಗಿ 118 ಅರ್ಜಿಗಳು ಸ್ವೀಕೃತವಾಗಿದ್ದು, ಸದರಿ ಕೈಗಾರಿಕಾ ಪ್ರದೇಶಗಳಲ್ಲಿ ಮೂಲಭೂತ ಸೌಕರ್ಯಗಳ ಅಭಿವೃದ್ಧಿ ಕಾರ್ಯ ಪ್ರಗತಿಯಲ್ಲಿದ್ದು, ಮುಗಿದ ನಂತರ ನಿಯಮಾನುಸಾರ ಯೋಜನೆಗಳ ಅನುಮೋದನೆಗೆ ಕ್ರಮ ವಹಿಸಲಾಗುತ್ತದೆ. |

**ಸಂಖ್ಯೆ: ಸಿಐ 40 ಐಎಪಿ 2026**

**(ಎಂ.ಬಿ. ಪಾಟೀಲ)**
ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ
ಮೂಲಸೌಲಭ್ಯ ಅಭಿವೃದ್ಧಿ ಸಚಿವರು

# ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ

ಅನುಬಂಧ-1

## ಧಾರವಾಡ ಜಿಲ್ಲೆಯ ಕೈಗಾರಿಕಾ ಪ್ರದೇಶಗಳಲ್ಲಿ ಜಮೀನು ಹಂಚಿಕೆ ಮಾಡಿರುವ ವಿವರಗಳು

| ಕ್ರ. ಸಂ. | ಕೈಗಾರಿಕಾ ಪ್ರದೇಶ | ಹಂಚಿಕೆ ಮಾಡಿದ ಘಟಕಗಳ ಸಂಖ್ಯೆ | ಹಂಚಿಕೆ ಮಾಡಿದ ಒಟ್ಟು ವಿಸ್ತೀರ್ಣ (ಎಕರೆ-ಗಳಲ್ಲಿ) | ಸಾಮಾನ್ಯ | | ಪ.ಜಾತಿ ವರ್ಗದವರಿಗೆ ಹಂಚಿಕೆ ಮಾಡಿರುವ ವಿವರ | | ಪ. ಪಂಗಡದವರಿಗೆ ಹಂಚಿಕೆ ಮಾಡಿರುವ ವಿವರ | |
|---|---|---|---|---|---|---|---|---|---|
| | | | | ಘಟಕ-ಗಳ ಸಂಖ್ಯೆ | ವಿಸ್ತೀರ್ಣ (ಎಕರೆ-ಗಳಲ್ಲಿ) | ಘಟಕ-ಗಳ ಸಂಖ್ಯೆ | ವಿಸ್ತೀರ್ಣ (ಎಕರೆ-ಗಳಲ್ಲಿ) | ಘಟಕ-ಗಳ ಸಂಖ್ಯೆ | ವಿಸ್ತೀರ್ಣ (ಎಕರೆ-ಗಳಲ್ಲಿ) |
| 1 | ಕೋಟೂರ್ ಬೇಲೂರ್ (EMC) | 2 | 50.05 | 3 | 50.05 | 0 | 0 | 0 | 0 |
| 2 | ಕೋಟೂರ್ ಬೇಲೂರ್ ಸಾಮಾನ್ಯ | 38 | 56.44 | 8 | 28.23 | 24 | 23.75 | 6 | 4.46 |
| 3 | ಕೋಟೂರ್ ಬೇಲೂರ್ (ಬಲ್ಕ್) | 2 | 143.40 | 2 | 143.40 | 0 | 0 | 0 | 0 |
| 4 | ಬೇಲೂರು | 590 | 1184.60 | 528 | 1152.59 | 47 | 27.43 | 13 | 4.58 |
| 5 | ಮಮ್ಮಿಗಟ್ಟಿ (FMCG) | 41 | 130.79 | 17 | 107.92 | 20 | 18.67 | 4 | 4.20 |
| 6 | ಮಮ್ಮಿಗಟ್ಟಿ 2ನೇ ಹಂತ | 0 | 0 | 0 | 00 | 0 | 0 | 0 | 0 |
| 7 | ಕೆಳಗೇರಿ ಎಸ್.ಸಿ./ಎಸ್.ಟಿ. ಕ್ಲಸ್ಟರ್ | 48 | 8.27 | 0 | 0 | 35 | 6.12 | 13 | 2.15 |
| 8 | ಲಕ್ಕಮ್ಮನಹಳ್ಳಿ | 35 | 62.72 | 35 | 62.72 | 0 | 0 | 0 | 0 |
| 9 | ಸತ್ತೂರ್ | 20 | 49.70 | 20 | 49.70 | 0 | 0 | 0 | 0 |
| 10 | ರಾಯಪುರ | 60 | 178.87 | 55 | 176.43 | 5 | 2.43 | 0 | 0 |
| 11 | ಗಾಮನಗಟ್ಟಿ | 205 | 233.04 | 111 | 172.55 | 63 | 41.30 | 31 | 19.18 |
| 12 | ಗಾಮನಗಟ್ಟಿ ಮಹಿಳಾ ಉದ್ದಿಮೆದಾರರ ಪಾರ್ಕ್ | 84 | 27.21 | 60 | 19.06 | 18 | 5.59 | 6 | 2.57 |
| 13 | ತಾರಿಹಾಳ | 289 | 235.95 | 263 | 226.96 | 20 | 6.83 | 6 | 2.16 |
| 14 | ತಾರಿಹಾಳ ಉಪ ಬಡಾವಣೆ | 50 | 14.39 | 8 | 6.19 | 20 | 7.16 | 13 | 3.01 |
| | **ಒಟ್ಟು** | **1464** | **2375.43** | **1110** | **2195.20** | **261** | **139.28** | **92** | **42.31** |

Karnataka Industrial Areas Development Board
Head Office, Bangalore